**ಡಿ.ವಿ.ಪಿ.ನಂ.**:6/2022

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **12-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಂದುವರಿದ ಪಾಟೀ ಸವಾಲು –ಎದುರುದಾರರ ಪರ ಶ್ರೀ. ಕೆ.ಆರ್.ಎನ್. ವಕೀಲರಿಂದ</u>**

ನಾನು ಭಟ್ಕಳದಿಂದ ನನ್ನ ತಾಯಿ ಮನೆಗೆ ಹೋಗುವ ಪೂರ್ವದಲ್ಲಿಯೇ ನಾನು ಈ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪಂಚಾಯತಿ ಆಗಿರುತ್ತದೆ. ನಾನು ಭಟ್ಕಳದಿಂದ ಬಂದ ಮೇಲೆ ನಮ್ಮ ಹಾಗೂ ಎದುರುದಾರರ ಕುಟುಂಬದ ನಡುವೆ ಪಂಚಾಯತಿಗೆ ಆಗಿದ್ದು, ಸದ್ರಿ ಪಂಚಾಯತಿಯು ಯಾವ ವರ್ಷದಲ್ಲಿ ಆಗಿತ್ತು ಎಂದು ನನಗೆ ನೆನಪಿಲ್ಲ. ಸದ್ರಿ ಪಂಚಾಯತಿಯು ಹಿರೇಗುತ್ತಿಯಲ್ಲಿ ಇರುವ ನನ್ನ ಮನೆಯಲ್ಲಿ ಆಗಿತ್ತು.

ಸದ್ರಿ ಪಂಚಾಯತಿಯಲ್ಲಿ ಜಿ.ಕೆ.ಪಟಗಾರ, ಘಟ್ಟಾ ಮಾಸ್ತರ, ಗೋಪಾಲ ಪಟಗಾರ ಹಾಗೂ ನನ್ನ ತಂದೆಯವರು ನಂತರ ಎದುರುದಾರರ ಚಿಕ್ಕಮ್ಮನವರು ಹಾಗೂ ಅವರ ಚಿಕ್ಕಣ್ಣನಾದ ದಯಾನಂದ ಪಟಗಾರ ಇವರು ಹಾಜರ ಇದ್ದರು. ಸದ್ರಿ ಪಂಚಾಯತಿಯಲ್ಲಿ ಎದುರುದಾರರಿಗೆ ನನ್ನನ್ನು ಕರೆದುಕೊಂಡು ಹೋಗುವಂತೆ ಹೇಳಿರುವುದಿಲ್ಲ.

ನಾನು 2020 ರಲ್ಲಿ ಸಾಂತ್ವನ ಕೇಂದ್ರಕ್ಕೆ ಅರ್ಜಿಯನ್ನು ನೀಡಿದ್ದು, ಅಲ್ಲಿ ಎದುರುದಾರಿಗೆ ನನ್ನನ್ನು ಕರೆದುಕೊಂಡು ಹೋಗಲು ತಿಳಿಸಿದ್ದು, ಆದರೆ ಅವರು ಒಪ್ಪಿರುವುದಿಲ್ಲ. ಗೋಕರ್ಣ ಪೊಲೀಸ ಠಾಣೆಯಲ್ಲಿ ನಾನು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಾನು ಕುಮಟಾ ಪೊಲೀಸ ಠಾಣೆ ಯಲ್ಲಿ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಾನು ಈಗಲೂ ಸಹ ಚಿಕಿತ್ಸೆಯನ್ನು

ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಬಾಣಂತಿ ಸನ್ನೆಯ ಸಂದರ್ಭದಲ್ಲಿ ಪಡೆದುಕೊಂಡ ಚಿಕಿತ್ಸೆಯನ್ನು ನನಗೆ ಎದುರುದಾರರು ನೀಡಿರುತ್ತಾರೆ.

ಚಿಕಿತ್ಸೆಯನ್ನು ನೀಡಿದಂತಹ ವೈದ್ಯರು ಖಾಯಂ ಆಗಿ ಮಾನಸಿಕ ಚಿಕಿತ್ಸೆಯನ್ನು ಪಡೆ ದುಕೊಳ್ಳಬೇಕು ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರಿಗೆ ನನಗೆ ಒತ್ತಡವನ್ನು ನೀಡಬಾರದು, ಒತ್ತಡವನ್ನು ನೀಡಿದರೆ ಸದ್ರಿ ಮಾನಸಿಕ ಕಾಯಿಲೆಯು ಪುನಃ ಬರಬಹುದು ಎಂದು ವೈದ್ಯಾಧಿಕಾರಿಗಳು ತಿಳಿಸಿರುತ್ತಾರೆ. ಆದರೂ ಸಹ ಈಗ ಎದುರುದಾರರು ಒತ್ತಡವನ್ನು ನೀಡುತ್ತಿದ್ದರೂ ಕೂಡ ಸದ್ರಿ ಕಾಯಿಲೆಯ ಮರುಕಳಿಸುವುದಿಲ್ಲ ಎಂದು ನುಡಿಯುತ್ತಾರೆ.

ನಾನು 9 ವರ್ಷದಿಂದಲೂ ಸಹ ನಾನು ನನ್ನ ತಾಯಿಯ ಮನೆಯಲ್ಲಿ ವಾಸ್ತವ್ಯದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. 2020 ನೇ ಸಾಲಿನಿಂದ ಅರ್ಜಿಯನ್ನು ದಾಖಲಿಸುವವರೆಗೂ ನಾನು ನನ್ನ ತಾಯಿ ಮನೆಯಲ್ಲಿ ಇದ್ದೇನು ಎಂದು ನನ್ನ ಅರ್ಜಿಯಲ್ಲಿ ಬರೆಸಿದ ವಿಷಯವು ಸುಳ್ಳು ಎಂಬ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಅಲ್ಲ ಅದು ನಿಜವಾಗಿರುತ್ತದೆ ಎಂದು ನುಡಿಯುತ್ತಾರೆ.

ಅದೇ ರೀತಿಯಾಗಿ ನಾನು ಮಧ್ಯಂತರ ಅರ್ಜಿಯಲ್ಲಿ ನಾನು ಯಾವ ತಾರೀಖಿನಿಂದ ನನ್ನ ಗಂಡನ ಜೊತೆ ಇಲ್ಲ ಎಂಬ ಬಗ್ಗೆ ಬರೆಸಿರುವುದಿಲ್ಲ. ಅದೇ ರೀತಿಯಾದ ನಾನು ಬರೆದಂತಹ ಮೂಲ ಅರ್ಜಿಯಲ್ಲೂ ಸಹ ಈ ವಿಷಯದ ಕುರಿತಾಗಿ ನಮೂದು ಮಾಡಲಿಲ್ಲ ಎಂದರೆ ಸರಿ.

ಎದುರುದಾರರು ಭಟ್ಕಳ ನ್ಯಾಯಾಲಯದಲ್ಲಿ ನನ್ನ ವಿರುದ್ಧ ವೈವಾಹಿಕ ಜೀವನದ ರದ್ದತಿಗಾಗಿ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ನಾನು ಸದ್ರಿ ಪ್ರಕರಣದಲ್ಲಿ ನನಗೆ ಮಕ್ಕಳನ್ನು ಕೊಡಬೇಕು ಎಂದು ಅರ್ಜಿ ಹಾಕಿದ್ದೇನೆ ಎಂದರೆ ಸರಿ. ಸದ್ರಿ ಅರ್ಜಿಯನ್ನು ನ್ಯಾಯಾಲಯವು ವಜಾ

ಮಾಡಿರುತ್ತದೆ ಎಂದರೆ ಸರಿ. ಸದ್ರಿ ಪ್ರಕರಣ ಇನ್ನೂ ತನಕ ವಿಚಾರಣೆಯಲ್ಲಿ ಬಾಕಿ ಇದೆ ಎಂದರೆ ಸರಿ. ಸದ್ರಿ ಪ್ರಕರಣಕ್ಕೆ ನಾನು ಈಗಲೂ ಸಹ ವಿಚಾರಣೆಗೆ ಹಾಜರ ಆಗುತ್ತಿದ್ದೇನೆ ಎಂದರೆ ಸರಿ. ಎದುರುದಾರರಿಗೆ ನಿಪಿ5 ರಿಂದ 11 ರಲ್ಲಿ ನಮೂದು ಇರುವಂತೆ ಹಿರೇಗುತ್ತಿಯಲ್ಲಿ ಇರುವ ಆಸ್ತಿಯು ಅವರ ಸಾಮೂಹಿಕ ಆಸ್ತಿ ಎಂದರೆ ಸರಿ.

ಸದ್ರಿ ಆಸ್ತಿಗಳನ್ನು ಎದುರುದಾರರು ಸ್ವತಂತ್ರವಾಗಿ ಸಾಗುವಳಿ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ಅವರ ಸಹೋದರರು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದ್ರಿ ಆಸ್ತಿಗಳಲ್ಲಿ ನನಗೆ ಎಷ್ಟು ಉತ್ಪನ್ನ ಹಾಗೂ ಖರ್ಚು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿಯಾಗಿ ನನ್ನ ಇಬ್ಬರು ಮಕ್ಕಳು ಬೇರೆ ಬೇರೆ ಹಾಸ್ಟೇಲ್‌ನಲ್ಲಿ ಓದುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಎಷ್ಟು ಖರ್ಚು ವೆಚ್ಚಗಳು ಬರುತ್ತವೆ ಎಂಬ ಬಗ್ಗೆ ನನಗೆ ತಿಳಿದಿಲ್ಲ.

ನಾನು ಕೆ ಎಸ್ ಹೆಗಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳುವ ಸಂದರ್ಭದಲ್ಲಿ ನನ್ನ ತಂದೆಯವರು ಎದುರುದಾರರಿಗೆ ಈ ವಿಷಯವನ್ನು ದುರವಾಣಿ ಮುಖಾಂತರ ತಿಳಿಸಲು ಪ್ರಯತ್ನಿಸಿದಾಗ ಎದುರುದಾರರು ದೂರವಾಣಿ ಕರೆಯನ್ನು ಸ್ವೀಕರಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಎದುರುದಾರರ ಸಂಬಂಧಿಕರಿಗೆ ವಿಷಯವನ್ನು ತಿಳಿಸಿದ್ದು, ಆದರೂ ಕೂಡ ಎದುರುದಾರರು ಹಾಗೂ ಮಕ್ಕಳು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ವಿಷಯವನ್ನು ದಯಾನಂದ ಟೀಚರ ಇವರ ಬಳಿ ಹೇಳಿ ಕಳುಹಿಸಿರುತ್ತಾರೆ.

ರೋಹಿತ ಇವನಿಗೆ ಶಾಶ್ವತ ಅಂಧತ್ವ ಇದ್ದು, ಪ್ರತಿ ತಿಂಗಳು ಚಿಕಿತ್ಸೆಯನ್ನು ಪಡೆಯಬೇಕು ಎಂದರೆ ಸಾಕ್ಷಿಯು ಮಕ್ಕಳು ನನ್ನ ಜೊತೆ ಇಲ್ಲದೇ ಇರುವುದರಿಂದ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ಎದುರುದಾರು ವಿಪರೀತಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಕಾಯಿಲೆಯು ನಾನು ಎದುರುದಾರರಿಗೆ ತೊಂದರೆ ನೀಡಿರುವುದರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನೇ ಎದುರುದಾರರ ಸಾಂಗತ್ಯದಿಂದ ದೂರವಾಗಿ ಅವರನ್ನು ಪರಿತ್ಯಜಿಸಿ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 06/04/2017 ರಂದು ನನ್ನ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡು ಎದುರುದಾರರಿಗೆ ವಿಷಯವನ್ನು ತಿಳಿಸದೇ ಮನೆಯಿಂದ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಎದುರುದಾರರ ಮನೆಯಿಂದ ನನ್ನ ತಾಯಿ ಮನೆಯಲ್ಲಿ ಹಾಕಿದ ಬಂಗಾರವನ್ನು ತೆಗೆದುಕೊಂಡು ಬಂದಿರುತ್ತೇನೆ. ನಾನೇ ಸ್ವತಃ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವಾಗ ಚಿಕಿತ್ಸೆಯನ್ನು ನೀಡಿದರೂ ಸಹ ಅವುಗಳನ್ನು ಕಡೆಗಣಿಸಿ ನಾನು ಎದುರುದಾರರಿಗೆ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವುದರಿಂದ ಎದುರುದಾರರು ವೈವಾಹಿಕ ರದ್ದತಿಗಾಗಿ ಪ್ರಕಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕಷ್ಟು ಸಲ ನನಗೆ ಚಿಕಿತ್ಸೆಯನ್ನು ನೀಡಿದರೂ ಸಹ ನನ್ನ ಕಾಯಿಲೆ ಗುಣವಾಗಲಿಲ್ಲ ಎಂದರೆ ಸರಿಯಲ್ಲ. ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ